**ಓ ಎಸ್ ನಂಃ361/2019**
**ಪಿ. ಡಬ್ಲ್ಯೂ ಃ 1**

**ದಿಃ 05.03.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲು ಃ 1ನೆ ಪ್ರತಿವಾದಿ ಪರ ಶ್ರೀ ಎಂ.ವಿ.ಎಸ್ ವಕೀಲರಿಂದ ಃ**

ನಿಸಾರ್ ಅಹಮ್ಮದ್ ನನ್ನ ಅಣ್ಣನಾಗಬೇಕು. 1ನೇ ವಾದಿಯು ದಾವಾ ಐಟಂ ನಂಬರ್ 1 ರಲ್ಲಿ 1 ಎಕರೆ 3 ಗುಂಟೆಯನ್ನು ಅಡಮಾನ ಮಾಡಿ ದಿನಾಂಕ ಃ 31.05.2012 ರಂದು ರೂ. 35 ಸಾವಿರ ಸಾಲ ಪಡೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಜುಬೇದಾಬಿ ಇವರು ಸಹ ದಿನಾಂಕ ಃ12.01.2010 ಸ.ನಂ. 170/2 ರಲ್ಲಿ 30 ಗುಂಟೆಯನ್ನು ಅಡಮಾನ ಮಾಡಿ ಸಾಲ ಪಡೆಯುವುದು ಮತ್ತು ಮರುಪಾವತಿ ಮಾಡುವುದು ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಒಂದು ಕ್ರಯಪತ್ರದ ದೃಢೀಕೃತ ಪ್ರತಿಯನ್ನು ತೋರಿಸಿ ಅದರಲ್ಲಿ ಖುದ್ದುಸ್ ಖಾನ್ ಮತ್ತು ಅವರ ಮಕ್ಕಳ ಫೋಟೋಗಳಿವೆ ಎಂದರೆ ಸಾಕ್ಷಿ ಅವುಗಳು ಸರಿಯಾಗಿ ಕಾಣಿಸುವುದಿಲ್ಲ ಎಂದು ಹೇಳುತ್ತಾರೆ. ಖುದ್ದುಸ್ ಖಾನ್ ಇವರ ಅಣ್ಣ ತಮ್ಮಂದಿರು ಆ ಪತ್ರದಲ್ಲಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಿನಾಂಕ ಃ10.03.1990 ರಂದು ಆದ ವಿಭಾಗಪತ್ರದ ಪ್ರಕಾರ ಖುದ್ದುಸ್ ಖಾನ್ ತನಗೆ ಬಂದ ಸ್ವತ್ತಿನ ಪೈಕಿ ಸ.ನಂ. 172/2 ಮತ್ತು ಸ.ನಂ. 172/14 ಎ ಇದರಲ್ಲಿ ಇರುವ ಸ್ವತ್ತುಗಳು ಶೋಭಾ ಕುಮಾರ್ ಎಂಬುವವರಿಗೆ ದಿನಾಂಕ ಃ 16.09.2005 ರಲ್ಲಿ ಮಾರಾಟ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ಈಗ ಶೋಭಾ ಕುಮಾರ್ ಇವರು ಸ್ವಾಧೀನದಲ್ಲಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸ.ನಂ. 172/2 ಮತ್ತು ಸ.ನಂ. 172/14 ಎ ಈ ಸ್ವತ್ತುಗಳನ್ನು ಯಾರು ವ್ಯವಸಾಯ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಾನು ಊರಿನಲ್ಲಿ ಇಲ್ಲದ ಕಾರಣ ಯಾರು ವ್ಯವಸಾಯ ಮಾಡುತ್ತಿದ್ದಾರೆ ಎಂದು ಗೊತ್ತಿಲ್ಲ ಎಂದರೆ ಸರಿ. ವಾದಿಯು ನಮ್ಮ ಮೇಲೆ ಭಾಗ ಕೇಳಿ ಒಂದು ಕೇಸ್ ಮಾಡಿದ್ದರು ಎಂದರೆ ಸರಿಯಲ್ಲ.

ಫಯಾಜ್ ಅಹಮ್ಮದ್ ನನ್ನ ತಮ್ಮ. ಅವರು ನಮ್ಮ ಮೇಲೆ ಕೇಸ್ ಹಾಕಿದ್ದು ನನಗೆ ಗೊತ್ತಿಲ್ಲ. ಆ ಕೇಸ್ ನಲ್ಲಿ ನಮಗೆ ಸಮನ್ಸ ಜಾರಿಯಾಗಿತ್ತು ಎಂದರೆ ಸರಿಯಲ್ಲ. ನಾವು ನ್ಯಾಯಾಲಯಕ್ಕೆ ಹಾಜರಾಗಿರಲಿಲ್ಲ ಎಂದರೆ ಸರಿಯಲ್ಲ. ಎ ಸಿ ನ್ಯಾಯಾಲಯದಲ್ಲಿ ಎರಡು ಕೇಸ್ ಹಾಕಿದ್ದ ಬಗ್ಗೆ ನನಗೆ ಗೊತ್ತಿಲ್ಲ. ಈ ಹಿಂದೆ ಸಾಕ್ಷಿ ಹೇಳಿದಾಗ ದಾವೆ ಹಾಕಿದ್ದು ಮತ್ತು ಎ ಸಿ ನ್ಯಾಯಾಲಯ ದಲ್ಲಿ ಅಪೀಲು ಹಾಕಿದ್ದನ್ನು ಒಪ್ಪಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆ ವಿಷಯವನ್ನು ವಾದಪತ್ರದಲ್ಲಿ ಬರೆಸಲು ಯಾವುದೆ ತೊಂದರೆ ಇರಲಿಲ್ಲ, ಆದರೆ ನನಗೆ ಗೊತ್ತಿರಲಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. ನನಗೆ ಎಲ್ಲ

ವಿಷಯಗಳು ಗೊತ್ತಿದ್ದರೂ ಸಹ ಸತ್ಯಾಂಶವನ್ನು ಮರೆಮಾಚಿ ಸುಳ್ಳು ದಾವೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಮೂಲ ಪಂಚಾಯಿತಿ ಪಾರಿಕತ್ ಮುಸ್ತಾಫ ಖಾನ್ ಇವರ ಬಳಿ ಇದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನಲ್ಲಿ ಈಗಾಗಲೇ ಭಾಗವಾಗಿದೆ ಎಂದರೆ ಸರಿಯಲ್ಲ. ನಾನಾಗಲಿ ಅಥವಾ ಉಳಿದ ವಾದಿಗಳಾಗಲಿ ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇಲ್ಲ ಎಂದರೆ ಸರಿಯಲ್ಲ. 1ನೆ ವಾದಿ ಮಾತ್ರ ಊರಿನಲ್ಲಿರುತ್ತಾರೆ. ಅವರನ್ನು ಹೊರತುಪಡಿಸಿ ನಾವು ಉಳಿದವರು ದಾವಾ ಸ್ವತ್ತಿಗೆ ಹೋಗಿಲ್ಲ. ಆದರೆ ಊರಿಗೆ ಬಂದಾಗ ಹೋಗಿ ಬರುತ್ತೇವೆ ಎಂದು ಸಾಕ್ಷಿ ಹೇಳುತ್ತಾರೆ. 1ನೆ ಪ್ರತಿವಾದಿಗೆ ಸೇರಿದ ದಾವಾ ಸ್ವತ್ತನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ : ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**